| | |
|---|---|
| ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು<br>ವಿ.ವಿ. ಪುರಂ, ಬೆಂಗಳೂರು-04<br>**Mock Paper - 1 February 2017** | **Course:** ದ್ವಿತೀಯ ಪಿ.ಯು.ಸಿ.<br>**Subject:** ಕನ್ನಡ<br>**Max. Marks:** 100<br>**Duration:** 3:00 ಗಂಟೆ 15 ನಿಮಿಷಗಳು |

## ಅ – ವಿಭಾಗ

**I. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 1 X 10 = 10**

1. ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು?
2. ಧರ್ಮರಾಯನಿಗೆ ಎಂಥ ಗರ ಹೊಡೆದಿದೆ?
3. ಕನಸು ಬಂಡಿಯ ಕೆಳಗೆ ನಿದ್ರಿಸುವುದು ಹೇಗೆ?
4. ಕವಯಿತ್ರಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ?
5. ವಾಲ್‌ಪರ್ಲೈನ ದುರಂತದ ಮೂಲಬೀಜಗಳು ಯಾವ ರೂಪದಲ್ಲಿ ಬಂದವು?
6. ಬೆಳ್ಳಿಲೋಟ ಏನನ್ನು ಕಳೆದುಕೊಂಡಿತ್ತು?
7. ಕಲ್ಲಪ್ಪನವರ ಗೂಢ ಪ್ರಶ್ನೆ ಯಾವುದು?
8. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?
9. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು?
10. ಪೋಲೀಸರು ಏನೆಂದು ಮಹಜರು ಬರೆದುಕೊಂಡರು?

## ಆ – ವಿಭಾಗ

**II. ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2 X 4 = 8**

11. ಯಾರು ಮನೆಮನೆಯನ್ನು ತಿರಿಯನು? ಕೆರೆಯುದಕವನ್ನರಸದವನು ಯಾರು?
12. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?
13. ಹಡೆದವ್ವನನ್ನು ಯಾವಾಗ ನೆನೆಯಬೇಕು?
14. ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ಅನ್ನುವಂತಿದೆ?
15. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?

**ಆ) ಯಾವುದಾದರೂ 3 ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2 X 3 = 6**

16. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?
17. ಯಾವ ಉತ್ತರಗಳಿಂದ ಲೇಖಕಿಗೆ ತೃಪ್ತಿಯಾಗಲಿಲ್ಲ?

18. ವಿ.ಜೆ. ಸುಂದರಂ ಸಿಕಂದರಾಬಾದ್ ಶಾಲಾ ಬಾಲಕಿ ಬಗೆಗೆ ಹೇಳಿದ ಹೆಮ್ಮೆಯ ಮಾತುಗಳಾವುವು?

19. ಅರಮನೆಯಿಂದ ಎಂತಹ ಬಹುಮಾನ ಸಿಗಬಹುದೆಂದು ಮುದ್ದಣ ಹೇಳಿದನು?

**ಇ) ಇವುಗಳಲ್ಲಿ 3 ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ. 2 X 3 = 6**

20. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

21. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?

22. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ – ವಿಭಾಗ

**III. ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭಸೂಚಿಸಿ ಸ್ವಾರಸ್ಯ ಬರೆಯಿರಿ. 3 X 2 = 6**

24. ತಾಯಿ ಮೊಲೆವಾಲು ನಂಜಾಗಿ ಕೊಲುವಡೆ.

25. ಲೋಕದೊಳ್ ಮಡಿಯೇ ನಿರ್ಮಲ ಚಿತ್ತವೈ.

26. ಬರಲುಂಟೆ ಸುಗ್ಗಿ ಮತ್ತೆ?

**ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭಸೂಚಿಸಿ. ಸ್ವಾರಸ್ಯ ಬರೆಯಿರಿ. 3 X 1 = 3**

27. ಇಂಗ್ಗಿಷ್, ಹಿಂದಿ ಬಾರದವರು ವಿಮಾನ ಪ್ರಯಣ ಮಾಡಬಾರದೆ?

28. ಅನಕ್ಷರಸ್ಥರ ಪಾರ್ಲಿಮೆಂಟು.

**ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭಸೂಚಿಸಿ, ಸ್ವಾರಸ್ಯ ಬರೆಯಿರಿ. 3 X 1 = 3**

29. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ.

30. ಆನೆ ಬೇಲಿದಾಟಿ ಹೋಯ್ತು ಸಾರ್.

## ಈ – ವಿಭಾಗ

**IV. ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4 X 3 = 12**

31. ಪ್ರಮದವನದಲ್ಲಿ ರಾವಣ – ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

32. ಈ ಕಾವ್ಯಭಾಗದಲ್ಲಿ ಬಂದಿರುವ ಭೀಮ – ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

33. "ಹತ್ತಿ... ಚಿತ್ತ... ಮತ್ತು" – ಕವಿತೆಯ ಸ್ವಾರಸ್ಯವನ್ನು ಚರ್ಚಿಸಿರಿ.

34. ಕವಯಿತ್ರಿ ಅಗ್ನಿಪರ್ವತ, ಜ್ವಾಲಾಮುಖಿ ಆಗಿದ್ದೇನೆ ಎನ್ನಲು ಕಾರಣಗಳೇನು?

**ಆ) ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4 X 2 = 8**

35. ಸಿಂಹಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನನುಕೂಲಗಳಾವುವು? ವಿವರಿಸಿ.

36. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

37. ಮುದ್ದಣ– ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

**ಇ) ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4 X 2 = 8**

38. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

39. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

40. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

## ಉ – ವಿಭಾಗ

**V. ಅ) ಇವುಗಳಲ್ಲಿ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ. 5 X 1 = 5**

41. ಆರಿಗುಸುರುವೆನಾರ ಸಾರುವೆ
ನಾರಿಗೊರಲುವೆನಾರಿಗರುಹುವೆ
ನಾರ ಬೇಡುವೆನಕಟ ಹೆಂಗಸು ಜನ್ಮವನು ಸುಡಲಿ
ಘೋರ ಪಾತಕಿಯೆನ್ನವೊಲು ಮು
ನ್ನಾರು ನವೆದವರುಂಟು ಮರಣವು
ಬಾರದೆಂದೊರಲಿದಳು ಬಸುರನು ಹೊಯ್ದು ಶಶಿವದನೆ॥

**ಅಥವಾ**

42. ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ,
ಕೇಕು, ಚಳಿ, ನಕ್ಷತ್ರ ದೀಪ;
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ;
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ,
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ
ಬೆಚ್ಚಗಾಗಿದೆ ಮೋಂಬತ್ತಿ.

**VI. ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 2 X 6 = 12**

43. **ಈ ಪದಗಳ ಅರ್ಥ ಬರೆಯಿರಿ:–** 1) ನಿಶೆ 2) ಬಿತ್ತ

44. **ಈ ಪದಗಳ ನಿಷೇಧರೂಪ ಬರೆಯಿರಿ:–** 1) ಹಾಡುವೆನು 2) ಕರೆಯುವರು

45. **ಈ ಪದಗಳ ತತ್ಸಮರೂಪ ಬರೆಯಿರಿ:–** 1) ಸಂಸ್ಥೆ 2) ಜೋಗಿ

46. **ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ:–** 1) ರಾವಣನಿಂದ 2) ಮನೆಯನ್ನು

47. **ಈ ಕ್ರಿಯಾಪದಗಳ ಧಾತು ರೂಪ ಬರೆಯಿರಿ:–** 1) ನೋಡುತ್ತಾರೆ 2) ಆಸ್ವಾದಿಸು

48. **ಈ ಪದಗಳ ಕಾಲ ಗುರುತಿಸಿ:–** 1) ಕರೆವರು 2) ಬರುತ್ತಿದ್ದರು

49. **ಈ ಪದಗಳ ಗುಣವಾಚಕಗಳನ್ನು ಗುರುತಿಸಿ:–** 1) ಉಜ್ವಲ ಭವಿಷ್ಯ 2) ಕಿರುಹಾದಿ

**ಆ) ಯಾವುದಾದರೂ ಒಂದು ವಿಷಯದ ಬಗ್ಗೆ ಪ್ರಬಂಧ ಬರೆಯಿರಿ:– 5 X 1 = 5**

50. ಐತಿಹಾಸಿಕ ಸ್ಥಳಗಳ ಸಂರಕ್ಷಣೆ.

51. ನನ್ನ ಬಾಲ್ಯದ ಸ್ಮೃತಿಗಳು.

**ಇ) ಪತ್ರಲೇಖನ:– ಯಾವುದಾದರೂ ಒಂದು ವಿಷಯದ ಬಗ್ಗೆ ಪತ್ರ ಬರೆಯಿರಿ. 4 X 1 = 4**

52. ನಿಮ್ಮ ಕಾಲೇಜಿನಲ್ಲಿ ವರ್ಷಪೂರ್ತಿ ನಡೆದ ಕನ್ನಡ ಕಾರ್ಯಕ್ರಮಗಳ ಬಗ್ಗೆ ನಿಮ್ಮ ತಾಯಿತಂದೆಗಳಿಗೆ ಪತ್ರ ಬರೆಯಿರಿ.

53. ನಿಮ್ಮ ಕಾಲೇಜಿನ ಗ್ರಂಥಾಲಯಕ್ಕೆ ಬೇಕಾದ ಕನ್ನಡ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಪುಸ್ತಕ ಭಂಡಾರವೊಂದಕ್ಕೆ ಪತ್ರ ಬರೆಯಿರಿ.

**ಈ) ಯಾವುದಾದರೂ ಒಂದು ಗಾದೆ ಮಾತನ್ನು ವಿಸ್ತರಿಸಿ. 4 X 1 = 4**

54. ಸಜ್ಜನರ ದು:ಖ, ದುರ್ಜನರ ಸಿರಿ ಶಾಶ್ವತವಲ್ಲ.

55. ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು.

*********